ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಶಾಸನ

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ                ದಿನಾಂಕ : DATE : 26/07/2019

# ಆರ್‌ಟಿಐ ತಿದ್ದುಪಡಿ ಮಸೂದೆಗೆ ಒಪ್ಪಿಗೆ

## ರಾಜ್ಯಸಭೆಯಲ್ಲಿ ಬಹುಮತ ಇಲ್ಲದಿದ್ದರೂ, ಅಂಗೀಕಾರ ಪಡೆಯುವಲ್ಲಿ ಸರ್ಕಾರ ಯಶಸ್ವಿ

**ನವದೆಹಲಿ:** ಆರ್‌ಟಿಐ ಕಾಯ್ದೆಯ ತಿದ್ದುಪಡಿ ಮಸೂದೆ ಸಂಸತ್ತು ಗುರುವಾರ ವಿಪಕ್ಷದ ತೀವ್ರ ವಿರೋಧದ ನಡುವೆ ರಾಜ್ಯಸಭೆಯಲ್ಲೂ ಅಂಗೀಕಾರಗೊಂಡಿದ್ದು, ಸಂಸತ್ತಿನ ಅನುಮೋದನೆ ಪಡೆದುಕೊಂಡಿದೆ. ಮಸೂದೆಗೆ ವಿರೋಧ ವ್ಯಕ್ತಪಡಿಸಿದ್ದ ವಿಪಕ್ಷಗಳು, ಸದನ ಸಮಿತಿಗೆ ವಹಿಸಬೇಕು ಎಂದು ಆಗ್ರಹಿಸಿ ಗೊತ್ತುವಳಿ ಮಂಡಿಸಿದ್ದವು. ಆದರೆ, ಈ ಗೊತ್ತುವಳಿಯ ವಿರುದ್ಧವಾಗಿ 117 ಹಾಗೂ ಪರವಾಗಿ 75 ಮಂದಿ ಮತಚಲಾಯಿಸಿದ್ದರಿಂದ ಗೊತ್ತುವಳಿಯನ್ನು ತಿರಸ್ಕರಿಸಲಾಯಿತು.

ಆರ್‌ಟಿಐ ತಿದ್ದುಪಡಿ ಮಸೂದೆ-2019 ಸ್ವಾಯತ್ತ ಸಂಸ್ಥೆಯಾಗಿರುವ ಮಾಹಿತಿ ಹಕ್ಕು ಆಯುಕ್ತರ ವೇತನ, ಅವಧಿ ಮತ್ತಿತರ ಮಹತ್ವದ ಅಂಶಗಳ ಬಗ್ಗೆ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಸರ್ಕಾರಕ್ಕೆ ನೀಡಲಿದೆ. ಈ ಮಸೂದೆ ಜಾರಿಯಿಂದ ಆರ್‌ಟಿಐ ಕಾಯ್ದೆಯು ಇನ್ನು ಮುಂದಿನ ದಿನಗಳಲ್ಲಿ ಸರ್ಕಾರದ ವ್ಯಾಪ್ತಿಗೆ ಒಳಪಡಲಿದೆ ಎಂದು ವಿಪಕ್ಷಗಳು ಆರೋಪಿಸಿವೆ.

ರಾಜ್ಯಸಭೆಯಲ್ಲಿ ಸರ್ಕಾರಕ್ಕೆ ಬಹುಮತ ಇಲ್ಲವಾದರೂ, ಬಿಜೆಡಿ, ವೈಎಸ್‌ಆರ್ ಕಾಂಗ್ರೆಸ್, ಟಿಆರ್‌ಎಸ್ ಪಕ್ಷಗಳ ಬೆಂಬಲ ಪಡೆಯಲು ಯಶಸ್ವಿಯಾದ ಸರ್ಕಾರ, ಮಸೂದೆಗೆ ಅಂಗೀಕಾರ ಪಡೆಯುವಲ್ಲಿ ಯಶಸ್ವಿಯಾಗಿದೆ.

ಕ.ಪ್ರ. 26/7/19

## ತ್ರಿವಳಿ ತಲಾಖ್ ನಿಷೇಧಕ್ಕೆ ಲೋಕ ಅಸ್ತು



**ನವದೆಹಲಿ:** 'ತಲಾಖ್' ಎಂದು ಮೂರು ಬಾರಿ ಹೇಳಿ ವಿಚ್ಛೇದನ ನೀಡುವ ಮುಸಲ್ಮಾನರ ಪದ್ಧತಿ 'ತಲಾಖ್ ಎ ಬಿದ್ದತ್' ಅಕ್ರಮ ಎಂದು ಸಾರುವ ಮಸೂದೆ ಲೋಕಸಭೆಯಲ್ಲಿ ಗುರುವಾರ ಅಂಗೀಕಾರವಾಗಿದೆ. ತ್ರಿವಳಿ ತಲಾಖ್ ನೀಡುವ ಪತಿಯಂದಿರಿಗೆ ಮೂರು ವರ್ಷ ಜೈಲು ಶಿಕ್ಷೆ ವಿಧಿಸುವ ಪ್ರಸ್ತಾಪ ಈ ವಿಧೇಯಕದಲ್ಲಿದೆ. ಮಸೂದೆಯನ್ನು ಕಾಂಗ್ರೆಸ್ ವಿರೋಧಿಸಿದ್ದರೆ, ಬಿಜೆಪಿ ಮಿತ್ರಪಕ್ಷ ಜೆಡಿಯು ಕೂಡ ಅದೇ ಹಾದಿ ತುಳಿದು, ಸಭಾತ್ಯಾಗ ನಡೆಸಿದೆ.

ಲೋಕಸಭೆಯಲ್ಲಿ ಭರ್ಜರಿ ಬಹುಮತ ಹೊಂದಿರುವ ಕಾರಣ ಮಸೂದೆ ಅಂಗೀಕರಿಸಿರುವ ಕೇಂದ್ರ ಸರ್ಕಾರಕ್ಕೆ ರಾಜ್ಯಸಭೆಯಲ್ಲಿರುವ ಸಂಖ್ಯಾಬಲದ ಕೊರತೆ ಹಾಗೂ ಜೆಡಿಯು ವಿರೋಧ ಮಗ್ಗುಲ ಮುಳ್ಳಾಗಿ ಕಾಡಲಾರಂಭಿಸಿದೆ. ಆದರೆ ಟಿಆರ್‌ಎಸ್, ವೈಎಸ್ಆರ್ ಹಾಗೂ ಬಿಜೆಡಿ ಪಕ್ಷಗಳ ಸದಸ್ಯರ ಬೆಂಬಲ ಪಡೆದು ವಿಧೇಯಕವನ್ನು ಅಂಗೀಕರಿಸುವ ವಿಶ್ವಾಸದಲ್ಲಿ ಸರ್ಕಾರ ಇದೆ.

ಮಸೂದೆಯನ್ನು ಸದನದ ಪರಿಶೀಲನೆಗೆ ಇಟ್ಟು ಮಾತನಾಡಿದ ಕಾನೂನು ಸಚಿವ ರವಿಶಂಕರ ಪ್ರಸಾದ್, ಲಿಂಗ ಸಮಾನತೆ ಹಾಗೂ ನ್ಯಾಯಕ್ಕಾಗಿ ಈ ಮಸೂದೆ ಬೇಕೇಬೇಕು. 2017ರ ಆಗಸ್ಟ್‌ನಲ್ಲಿ ತ್ರಿವಳಿ ತಲಾಖ್ ಅನ್ನು ರದ್ದುಗೊಳಿಸಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದ ತರುವಾಯವೂ ಮುಸಲ್ಮಾನ ಮಹಿಳೆಯರಿಗೆ ತಲಾಖ್ ಎ ಬಿದ್ದತ್ ನಡಿ ವಿಚ್ಛೇದನ ನೀಡಲಾಗುತ್ತಿದೆ ಎಂದರು. ಈ ಮಸೂದೆಗೆ ವಿರೋಧ ವ್ಯಕ್ತಪಡಿಸಿದ, ಆರ್‌ಎಸ್‌ಪಿ ನಾಯಕ ಎನ್.ಕೆ. ಪ್ರೇಮಚಂದ್ರನ್, ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿಕೊಂಡು ಈ ಮಸೂದೆ ತಂದಿದ್ದೀರಿ. ನಿಮಗೆ ಅಷ್ಟೊಂದು ಕಾಳಜಿ ಇದ್ದಿದ್ದರೆ ಗುಂಪು ಹತ್ಯೆ ಕೊಲ್ಲುವ ಪದ್ಧತಿ ಅಂತ್ಯಗೊಳಿಸುವ ಕಾಯ್ದೆಯನ್ನೇಕೆ ತರಬಾರದು ಎಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

## ಮಹಿಳಾ 'ಸ್ಪೀಕರ್' ಜತೆ ಕಣ್ಣಲ್ಲಿ ಕಣ್ಣಿಟ್ಟು ಮಾತಾಡಬೇಕೆನಿಸುತ್ತಿದೆ!

**ನವದೆಹಲಿ:** ಸಮಾಜವಾದಿ ಪಕ್ಷದ ಸಂಸದ ಆಜಂ ಖಾನ್ ಮತ್ತೊಂದು ವಿವಾದ ಮಾಡಿಕೊಂಡಿದ್ದಾರೆ. ಲೋಕಸಭೆ ಸ್ಪೀಕರ್ ಅವರ ಅನುಪಸ್ಥಿತಿಯಲ್ಲಿ ಕಲಾಪ ನಿರ್ವಹಿಸುತ್ತಿದ್ದ ಹಿರಿಯ ಮಹಿಳಾ ಸಂಸದೆಯೊಬ್ಬರನ್ನು ಉದ್ದೇಶಿಸಿ 'ನಿಮ್ಮ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಬೇಕು ಎಂದು ನನ್ನ ಮನಸ್ಸು ಹೇಳುತ್ತಿದೆ' ಎಂದು ಆಜಂ ಹೇಳಿರುವುದು ಭಾರಿ ವಿವಾದಕ್ಕೆ ಕಾರಣವಾಗಿದೆ.

ತ್ರಿವಳಿ ತಲಾಖ್ ಕುರಿತು ಗುರುವಾರ ಲೋಕಸಭೆಯಲ್ಲಿ ಆಜಂ ಖಾನ್ ಮಾತನಾಡುತ್ತಿದ್ದರು. ಆಗ ಆಡಳಿತ ಪಕ್ಷದ ಸದಸ್ಯರೊಬ್ಬರನ್ನು ಉದ್ದೇಶಿಸಿ ಹೇಳಿಕೆಯೊಂದನ್ನು ನೀಡಿದರು. ಆ ವೇಳೆ ಸ್ಪೀಕರ್ ಸ್ಥಾನ ನಿರ್ವಹಿಸುತ್ತಿದ್ದ ಬಿಹಾರದ ಬಿಜೆಪಿ ಸಂಸದೆ ರಮಾ ದೇವಿ (70) ಅವರು, ಸಭಾಧ್ಯಕ್ಷ ಪೀಠವನ್ನು ನೋಡಿಕೊಂಡು ಮಾತನಾಡಿ, ಸದಸ್ಯರನ್ನಲ್ಲ ಎಂದು ಸೂಚನೆ ನೀಡಿದರು. ಆಗ ಆಜಂ ಖಾನ್ ಅವರು 'ನಿಮ್ಮ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಬೇಕು ಎಂದು ನನ್ನ ಮನಸ್ಸು ಹೇಳುತ್ತಿದೆ' ಎಂದು ಹೇಳಿದರು. ಆಗ ಕೇಂದ್ರ ಸಚಿವರು ಆಕ್ಷೇಪ ಎತ್ತಿದರು.

ಸಚಿವರ ಸಲಹೆಯಂತೆ ಕ್ಷಮೆ ಕೋರಲು ರಮಾದೇವಿ ಸೂಚಿಸಿದಾಗ, 'ನಿಮಗೆ ಅಗೌರವ ಮಾಡುವ ಉದ್ದೇಶ ಇಲ್ಲ. ನೀವು ನನಗೆ ಪ್ರೀತಿಯ ಸೋದರಿ ಇದ್ದಂತೆ' ಎಂದು ಆಜಂ ತೇಪೆ ಹಚ್ಚಲು ಯತ್ನಿಸಿದರು.